ಡಾ|| ಎಂ. ಪಿ. ಕರ್ಕಿ.—ಮಾನ್ಯ ಅಧ್ಯಕ್ಷರೆ, ಹಿಂದಿನ ಸರಕಾರ, ಹೊನ್ನಾವರ ತಾಲ್ಲೂಕನ್ನು ಅಂಗನವಾಡಿ ಕಾರ್ಯಕ್ರಮದ ಒಳಗೆ ಸೇರಿಸಿತ್ತು ಎಂದು ಖಚಿತವಾಗಿ ನನಗೆ ಗೊತ್ತಾಗಿದೆ. ಅದಕ್ಕೆ ಮಾನ್ಯ ಸಚಿವೆಯರು ಇನ್ನೂ ಒಮ್ಮೆ ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಎರಡನೆಯದಾಗಿ ಸಂಬಂಧಪಟ್ಟ ಇಲಾಖೆಯ ಜಿಲ್ಲಾ ಮುಖ್ಯಸ್ಥರು ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿ ತೆರೆಯಬೇಕೆಂದು ಹೇಳಿ ಸರಕಾರಕ್ಕೆ ಪತ್ರ ಬರೆದಿದ್ದಾರೆ. ಹೀಗಿರಬೇಕಾದರೆ, ಮಾನ್ಯ ಸಚಿವೆಯರು ಪರಿಶೀಲಿಸುತ್ತೇನೆ ಎಂಬ ವಾಕ್ಯ ಬಿಟ್ಟು ತಡವಾಗಿ ಪ್ರಾರಂಭ ಮಾಡುತ್ತೇವೆ ಎಂದು ಏತಕ್ಕೆ ಉತ್ತರ ಕೊಡಬಾರದು ಎಂದು ನಾನು ಕೇಳುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಅಧ್ಯಕ್ಷರೆ, ಈ ಅಂಗನವಾಡಿ ಪ್ರಾರಂಭಿಸುವುದು ಕೇಂದ್ರ ಸರಕಾರದಿಂದ ಪಡೆಯಬೇಕಾದ ಯೋಜನೆ. ಈ ಕಾರ್ಯಕ್ರಮವನ್ನು ೧೯೮೦ರ ವೇಳೆಗೆ ಇಡೀ ಜಿಲ್ಲೆಗಳಿಗೆ ಪಸರಿಸಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದರು. ಆದರೆ ನಮ್ಮ ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ ೧೯೮೫-೮೪ ೧೯೮೪-೮೫ ಮತ್ತು ೧೯೮೫-೮೬ ಹೀಗೆ ಬೇರೆ ಬೇರೆ ವರ್ಷಗಳಿಗೆ ಒಂದು ಪಟ್ಟಿ ತಯಾರು ಮಾಡಿ, ಯಾವ ಯಾವ ತಾಲ್ಲೂಕುಗಳನ್ನು ತೆಗೆದು ಕೊಳ್ಳಬೇಕೆಂದು ಕಳುಹಿಸಿಕೊಟ್ಟಂಥ ಕಾರ್ಯಕ್ರಮ ಕೇಂದ್ರದ ಪರಿಶೀಲನೆಯಲ್ಲಿದೆ. ಮಂಜೂರಾತಿ ಬಂದ ಕೂಡಲೇ ನಾವು ಪ್ರಾರಂಭಿಸುತ್ತೇವೆ. ಕೇಂದ್ರದವರು ಇದನ್ನು ಸೇರಿಸುವುದಾಗಲೀ ಬಿಡುಗಡೆ ಮಾಡುವುದಾಗಲೀ ಪ್ರಶ್ನೆ ಉದ್ಭವಿಸುವುದಿಲ್ಲ. ನಾವು ಕಳುಹಿಸಿರುವ ಎಲ್ಲಾ ಯೋಜನೆಗಳಿಗೆ, ಕೇಂದ್ರ ಸರಕಾರದ ಮಂಜೂರಾತಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾದಷ್ಟೂ ಪ್ರಯತ್ನ ಮಾಡುತ್ತೇವೆ. ಈ ಬಗ್ಗೆ ಪತ್ರವ್ಯವಹಾರ ಮಾಡುತ್ತಿದ್ದೇವೆ. ಸಂಬಂಧಪಟ್ಟ ಕೇಂದ್ರ ಮಂತ್ರಿಗಳಲ್ಲಿಯೂ ಕೂಡಾ ವಿನಂತಿ ಮಾಡಿಕೊಂಡಿದ್ದೇವೆ. ೧೯೮೫-೮೬ರ ಪಟ್ಟಿಯನ್ನು ೧೯೮೪-೮೫ರಲ್ಲಾದರೂ ಆಳವಡಿಸಿಕೊಡಿ ಎಂದು ಹೇಳಿದ್ದೇವೆ.

ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವ ಬಗ್ಗೆ

೪೨೪(೧೦೩೬) ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತೂರು) ಇವರ ಪರವಾಗಿ (ಶ್ರೀ ರಾಮಚಂದ್ರರಾವ್) ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರಿನ ಒಳಚರಂಡಿ ನೀರು ಪರ್ತೂರು ಕೆರೆಯು ಮೂಲಕ ನಿಷ್ಪ್ರಯೋಜಕವಾಗಿ ಹರಿದುಕೊಂಡು ಹೋಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬೆಂಗಳೂರು ಜಿಲ್ಲಾಭಿವೃದ್ಧಿ ಸಮಿತಿಯು ಈ ನೀರನ್ನು ಉಪಯೋಗಿಸಿಕೊಳ್ಳಲು ಏತ ನೀರಾವರಿ ಯೋಜನೆಯನ್ನು ಕೈಗೊಳ್ಳಬೇಕೆಂದು ಸರ್ಕಾರದವರಿಗೆ ಶಿಫಾರಸ್ಸು ಮಾಡಿದೆಯೇ ?

ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ೧೯೮೪-೮೫ರ ಆರ್ಥಿಕ ವರ್ಷದಲ್ಲಾದರೂ ಕೈಗೆತ್ತಿ ಕೊಳ್ಳುವ ಬಗ್ಗೆ ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ(ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಬೆಂಗಳೂರು ಜಿಲ್ಲಾಭಿವೃದ್ಧಿ ಸಮಿತಿಯಲ್ಲಿ ಚರ್ಚಿಸಲಾಗಿದೆ.

ಇ) ೧೯೮೪-೮೫ರ ಆರ್ಥಿಕ ವರ್ಷದಲ್ಲಿ ಈ ಯೋಜನೆಗಳನ್ನು(ನಾಲ್ಕು ಯೋಜನೆ)ಸೇರಿಸಲಾಗಿದೆ.

ಕೃಷ್ಣಾ ಗೋದಾವರಿ ಸಮಿತಿಯ ವರದಿಯ ಬಗ್ಗೆ

೪೭೬(೧೧೫೫) ಶ್ರೀ ಪಿ. ರಾಮದೇವ್ (ಮಲ್ಲೇಶ್ವರ)ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕೃಷ್ಣಾ ಗೋದಾವರಿ ಸಮಿತಿಯ ವರದಿಯ ಸಾರಾಂಶವೇನು ?